ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯವು ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ. ವಿದ್ಯುತ್ ಬೇಡಿಕೆಯನ್ನು ಲಭ್ಯತೆಯೊಂದಿಗೆ ಸರಿದೂಗಿಸುವ ಸಲುವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ನಿಯಮಿತ ಲೋಡ್ ಶೆಡ್ಡಿಂಗನ್ನು ನಿರ್ವಹಿಸಲಾಗುತ್ತಿದೆ. ಕೊಳ್ಳೇಗಾಲ ಮತ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಗ್ರಾಮಾಂತರ ಪ್ರದೇಶಗಳಲ್ಲಿಯೂ ಸಹ ನಿಯಮಿತ ಲೋಡ್ ಶೆಡ್ಡಿಂಗನ್ನು ನಿರ್ವಹಿಸಲಾಗುತ್ತಿದೆ.

ಆ), ಇ) ಮತ್ತು ಈ) ಹೌದು, ಬಂದಿದೆ. ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕಿನ ಕುತ್ತೂರಿನಲ್ಲಿ ಮೆ: ಮಹದೇಶ್ವರ ಸಕ್ಕರೆ ಕಾರ್ಖಾನೆ ಸಂಸ್ಥೆಯು 20 ಮೆ.ವ್ಯಾ. ಸಾಮರ್ಥ್ಯದ ಒಂದು ಕೋ ಜನರೇಷನ್ ಸ್ಥಾವರವನ್ನು ಸ್ಥಾಪಿಸಲು ಉದ್ದೇಶಿಸಿದೆ. ಕರ್ನಾಟಕ ಸರ್ಕಾರವು ದಿನಾಂಕ 3.2.2000ದ ಆದೇಶ ಸಂಖ್ಯೆ:ಸಿಐ 205 ಎಸ್‌ಜಿಎಫ್ 99ರ ಮೂಲಕ ಈ ಕೋ-ಜನರೇಷನ್ ಯೋಜನೆಗೆ ಅನುಮೋದನೆ ನೀಡಿರುತ್ತದೆ. ಈ ಉದ್ದೇಶಿತ ಯೋಜನೆಯಿಂದ ವಿದ್ಯುತ್ ರವಾನೆ ಸ್ಕೀಂ ಬಗ್ಗೆ ಕ.ವಿ.ಪ್ರ.ನಿ.ನಿ.ಯು ಅಧ್ಯಯನ ನಡೆಸುತ್ತಿದೆ. ಈ ಸಂಸ್ಥೆಯು ವಿದ್ಯುತ್ತನ್ನು ಕ.ವಿ.ಪ್ರ.ನಿ.ನಿ.ಗೆ ಮಾರುವ ಬಗ್ಗೆ. ಕ.ವಿ.ಪ್ರ.ನಿ.ನಿ.ಯೊಂದಿಗೆ ಇದುವರೆಗೆ ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಹಿ ಹಾಕಿರುವುದಿಲ್ಲ.

ತರೀಕೆರೆ ತಾಲ್ಲೂಕು ಕೂಡ್ಲೂರು ಬೀರೂರು ದೇವನಕೆರೆಗೆ ಹಣ ಬಿಡುಗಡೆ

4507 - ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತರೀಕೆರೆ ತಾಲ್ಲೂಕು ಕೂಡ್ಲೂರು ಬೀರೂರು ದೇವನ ಕೆರೆಯಿಂದ ನೀರನ್ನೊದಗಿಸಲು ಅಂದಾಜು ನಕ್ಷೆ ಆಗಿದೆಯೆ?*

ಆ) *2000-01ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸಲಾಗಿದೆಯೇ?*

ಇ) *ಆಯವ್ಯಯಕ್ಕೆ ಸೇರಿಸಲು ಮಾನ್ಯ ಮುಖ್ಯಮಂತ್ರಿಗಳು ಸಿಎಂ.278:ಎಂಎಲ್‌ಎ(1):2000 ದಿನಾಂಕ 18.2.2000ರಲ್ಲಿ ನೀಡಿರುವ ಆದೇಶವನ್ನು ಮಾನ್ಯ ಮಾಡಲಾಗುವುದೆ?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ತರೀಕೆರೆ ತಾಲ್ಲೂಕು ಕೂಡ್ಲೂರು ಕೆರೆಗೆ ಬೀರೂರು ದೇವನ ಕೆರೆಯಿಂದ ನೀರೊದಗಿಸುವ ಕಾಮಗಾರಿಗೆ ರೂ. 205.00 ಲಕ್ಷಗಳ ರೇಖಾ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಆ) 2000-01ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿಯು ಸೇರಿರುವುದಿಲ್ಲ.

ಇ) ಈ ಕಾಮಗಾರಿಯ ತಾಂತ್ರಿಕ ಮತ್ತು ಆರ್ಥಿಕ ಶಕ್ಯತೆ ಪರಿಶೀಲಿಸಿ ಪ್ರಸ್ತುತ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಪ್ರಯತ್ನಿಸಲಾಗುವುದು. ಒಂದು ಪಕ್ಷ ಈ ವರ್ಷ ಸಾಧ್ಯವಾಗದಿದ್ದಲ್ಲಿ ಮುಂದಿನ ವರ್ಷದ ಆಯವ್ಯಯದಲ್ಲಿ ಸೇರಿಸಲಾಗುವುದು.